# ಕೆಲವು ಆಮದಾದ ನಂಬಿಕೆಗಳು



ನಮ್ಮ ದೇಶದಲ್ಲೇ ಸಾಕಷ್ಟು ನಂಬಿಕೆಗಳು ಬೇರೂರಿರುವಾಗ, ಇದು ಸಾಲದೆಂಬಂತೆ ನಾವು ಹಲವಾರು ನಂಬಿಕೆಗಳನ್ನು ವಿದೇಶದಿಂದಲೂ ಪಡೆದಿದ್ದೇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನೀಡಲಾಗಿದೆ.

**ಕಪ್ಪು ಬೆಕ್ಕು ಕಂಡರೆ ಅಪಶಕುನ:** ಇದು ವಿದೇಶದಿಂದ ನಾವು ಪಡೆದುಕೊಂಡ ಮೂಢನಂಬಿಕೆ. ವಿದೇಶಿಯರಿಗೆ ಮಾಟಗಾತಿಯರೆಂದರೆ ಬಹಳ ಭಯ. ಮಾಟಗಾತಿಯರು ಮಂತ್ರಿಸಿದ ದ್ರಾವಣವನ್ನು ಮಾಡಲು ಕಪ್ಪುಬೆಕ್ಕುಗಳ ಮೆದುಳನ್ನು ಬಳಸುತ್ತಿದ್ದರೆಂಬ ಪ್ರತೀತಿ ಅವರಲ್ಲಿದೆ. ಅಲ್ಲದೆ, ಏಳು ವರ್ಷಗಳ ಕಾಲ ಸಾಯದೆ ಉಳಿದ ಕಪ್ಪುಬೆಕ್ಕು ಮಾಟಗಾತಿಯಾಗಿ ಪರಿವರ್ತನೆ ಹೊಂದುತ್ತದೆ ಎಂದು ಅವರಲ್ಲಿ ದೃಢವಾದ ನಂಬಿಕೆಯಿತ್ತು. ಮಾಟಗಾತಿಯರನ್ನು ಕಂಡರೆ ಇದ್ದ ಭಯ ಮುಂದೆ ಮಾಟಗಾತಿಯಾಗಬಹುದಾದ ಬೆಕ್ಕಿನ ಬಗ್ಗೆಯೂ ಆವರಿಸಿತು!

**ಏಣಿಯ ಕೆಳಗೆ ಹೋಗುವುದು ಅಶುಭ:** ಇದಕ್ಕೆ ಎರಡು ವಿದೇಶಿ ಕಾರಣಗಳುಂಟು. ಮೊದಲನೆಯದಾಗಿ ಗ್ರೀಕರು ಪಿರಮಿಡ್ ಮತ್ತು ತ್ರಿಕೋನಗಳಲ್ಲಿ ಬಹಳ ನಂಬಿಕೆ ಇಟ್ಟವರು. ಅವರ ಪ್ರಕಾರ ತ್ರಿಕೋನಾಕೃತಿಗೆ ಭಂಗ ತರುವ ಕ್ರಿಯೆಗಳು ಅಶುಭ. ಏಣಿ ಗೋಡೆಗೆ ಆನಿಸಿಟ್ಟಾಗ ಉಂಟಾದ ತ್ರಿಕೋನ ಮನುಷ್ಯ ತೂರಿದಾಗ ಭಂಗವಾಗುವುದರಿಂದ ಆ ಪ್ರಕ್ರಿಯೆ ಅಶುಭ ಎಂದು ನಂಬಿದ್ದರು. ಮತ್ತೊಂದು ಕಾರಣವೆಂದರೆ ಯೂರೋಪ್‌ನ ಪ್ರಾಂತ್ಯಗಳಲ್ಲಿ ನೇಣುಶಿಕ್ಷೆ ವಿಧಿಸಲ್ಪಟ್ಟ ವ್ಯಕ್ತಿಯನ್ನು ಏಣಿಯ ಏಳನೆಯ ಪಡಿಯಿಂದ ತೂಗು ಹಾಕುತ್ತಿದ್ದರು. ಅಂತಹ ಏಣಿಯ ಕೆಳಗೆ ಮತ್ತೊಬ್ಬ ತೂರಿಹೋದಾಗ ಆ ಏಳನೆಯ ಪಡಿಯಿಂದ ನೇಣುಹಾಕಲ್ಪಟ್ಟವನ ಆತ್ಮ ಇವರನ್ನು ಮೆಟ್ಟಿಕೊಳ್ಳಬಹುದು ಎಂಬ ಶಂಕೆ ಅವರಲ್ಲಿ ಮನೆಮಾಡಿದ್ದುದರಿಂದ ಏಣಿಯ ಕೆಳಗೆ ಹೋಗಬೇಡಿ ಎಂದು ಹೇಳುತ್ತಿದ್ದರು. ವಾಸ್ತವವಾಗಿ ಏಣಿ ಒಂದು ಕೋನದಲ್ಲಿ ಗೋಡೆಗೆ ಆನಿಸಿರುವುದರಿಂದಲೂ, ಅದರ ಮೇಲೆ ಹತ್ತುವಾಗ ಕಾಲುಗಳ ಬಳಿಯ ನೆಲ ಜಾರಿಕೆಯಿದ್ದರೆ ಅದು ಬೀಳುವ ಸಂಭವವಿರುತ್ತಿದ್ದುದರಿಂದಲೂ, ಯಾರಾದರೂ ಹತ್ತುತ್ತಿರುವಾಗ ಅಥವಾ ಇಳಿಯುತ್ತಿರುವಾಗ ಏಣಿಯ ಕೆಳಗೆ ಓಡಾಡಿದರೆ ಏಣಿ, ಏಣಿಯ ಮೇಲಿನ ವ್ಯಕ್ತಿಯ ಸಹಿತ ಕೆಳಗಿನವರ ಮೇಲೆ ಬೀಳುವ ಸಾಧ್ಯತೆ ಇದ್ದುದರಿಂದ ಏಣಿಯ ಕೆಳಗೆ ಓಡಾಡಬೇಡಿ ಎಂಬ ಒಂದು ಸಾಮಾನ್ಯ ಎಚ್ಚರಿಕೆಯ ನುಡಿಯನ್ನು ನೀಡುತ್ತಿದ್ದುದು ಜಾರಿಗೆ ಬಂದಿರಬೇಕಷ್ಟೆ. ಒಂದು ಮಾತಂತೂ ಸತ್ಯ. ವಿದೇಶದಲ್ಲಿ ಭಾರತಕ್ಕಿಂತಲೂ ಹೆಚ್ಚಿನ ಮೂಢನಂಬಿಕೆಗಳು ಮನೆಮಾಡಿವೆ.

**13ರ ಸಂಖ್ಯೆ ಅಶುಭ:** ಈ ಸಂಖ್ಯೆಯ ಮೇಲಿನ ಭಯ ಯಾವ ಮಟ್ಟಕ್ಕಿದೆಯೆಂದರೆ ವಿದೇಶದ ಹಲವಾರು ಕಟ್ಟಡಗಳಲ್ಲಿ ಹದಿಮೂರನೆಯ ಸಂಖ್ಯೆ ಹೊತ್ತ ಕೊಠಡಿಯಾಗಲಿ, ಅಂತಸ್ತಾಗಲಿ, ಇರುವುದಿಲ್ಲ. 12. 12ಎ. 14 ಎಂದು ಲೆಕ್ಕ ಹಾಕುವ ಪರಿಯೂ ಹಲವಾರು ವಿದೇಶಿಯರಲ್ಲಿ ಉಂಟು. ಏಸುಕ್ರಿಸ್ತನನ್ನು ಗಲ್ಲಿಗೆ ಏರಿಸುವ ಹುನ್ನಾರದಲ್ಲಿ 12 ಮಾಟಗಾತಿಯರು ಮತ್ತು ಒಬ್ಬ ಸೈತಾನ ಸೇರಿ ಒಟ್ಟು 13 ಮಂದಿ ದೇವಪುತ್ರನ ಅವಸಾನಕ್ಕೆ ಕಾರಣರಾದರು ಎಂಬ ಏಕೈಕ ಕಾರಣವನ್ನು ಮುಂದಿಟ್ಟು ಹದಿಮೂರು ಅಪಶಕುನ ಎಂಬುದನ್ನು ಅನುಷ್ಠಾನಕ್ಕೆ ತಂದುಕೊಂಡರು. ಹದಿಮೂರು ಮಂದಿ ಕೂಡಿದರೆ ಅಪಶಕುನ ಎಂಬ ಭಾವ ನಂತರ ಹದಿಮೂರು ಎಂಬ ಸಂಖ್ಯೆಯೇ ಅಪಶಕುನ ಎಂಬ ಮಟ್ಟಕ್ಕೆ ಹರಡಿತು. ಅಲ್ಲದೆ ನೋವಾ ಆರಂಭಿಸಿದ ಪ್ರವಾಹ ಮತ್ತು ಕ್ರಿಸ್ತನು ಗಲ್ಲಿಗೇರಿದ ದಿನ ಎರಡೂ ಶುಕ್ರವಾರವೇ ಆಗಿದ್ದು, ಆ ವಾರವೂ, ಹದಿಮೂರನೆಯ ದಿನಾಂಕವೂ ಸೇರಿದರೆ ಬಹಳವೇ ಕೆಟ್ಟದ್ದೆಂಬ ಪ್ರತೀತಿ ಮತ್ತಷ್ಟು ಬಲವಾಗಿ ಹಬ್ಬಿ, ಇಂದಿಗೂ 13ನೆಯ ದಿನಾಂಕದಂದು ಶುಕ್ರವಾರ ಬಿದ್ದರೆ ಅದು ಬಹಳ ಕ್ರೂರ ದಿನವೆಂದು ಅವರು ಪರಿಗಣಿಸುತ್ತಾರೆ. ನಮ್ಮಲ್ಲಿ ಶುಕ್ರವಾರ ಶುಭವೆಂದಿದ್ದು, ಅದನ್ನು ಯಾವ ವಿದೇಶಿ ನಂಬಿಕೆಯೂ ಅಲುಗಾಡಿಸದಿದ್ದರೂ, 13 ಅಶುಭ ಎಂಬುದು ಕೆಲವರ ನಂಬಿಕೆಯಾಗಿದೆ. ಇದಲ್ಲದೆ ಗ್ರಹಗಳು ಒಂಬತ್ತಾದುದರಿಂದ 9 ಮತ್ತು ಶನಿಯ ಸಂಖ್ಯೆ ಏಳು ಆದುದರಿಂದ 7 ಸಹ ಅಶುಭ ಎಂದು ಪರಿಗಣಿಸಲ್ಪಟ್ಟಿವೆ. ಏಳನೆಯ ದಿವಸವಾದ ಶನಿವಾರವೂ ಅಶುಭ ಎಂಬ ನಂಬಿಕೆ ಮೂಡಿರುವುದು ಶನಿಯ ಮೇಲಿನ ಭಯದಿಂದಲೇ. ಆದರೆ, ಅಲ್ಲಿ 7 ಮತ್ತು 9 ತೊಂದರೆ ಕೊಡದಿರುವುದು, ಇಲ್ಲಿ 13 ತೊಂದರೆ ಕೊಡದಿರುವುದು ಸಂಖ್ಯೆಗಳಿಂದ ಯಾವುದೇ ತೊಂದರೆಗಳು ಆಗುವುದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿವೆ. ಮಾನವನಿಗೆ ತನ್ನ ಮನಸ್ಸಿನ ಮೇಲೆ ಹತೋಟಿ ಸಾಧಿಸಲು ಸಾಧ್ಯವಾದರೆ ಈ ಎಲ್ಲಾ ಕ್ಷುಲ್ಲಕ ನಂಬಿಕೆಗಳಿಂದ ಹೊರಬರಬಹುದು. ತನಗೆ ಇಷ್ಟ ಬಂದಾಗ ಹೊರಬರುವುದೂ ದಿಟ. ಉದಾಹರಣೆಗೆ ಒಂದು ಸಾವಿರ ಡಾಲರ್‌ಗಳನ್ನು ಒಂದು 500, ನಾಲ್ಕು 100, ಒಂದು 50, ಒಂದು 20, ಮತ್ತು ಮೂರು 10ರ ನೋಟುಗಳ ಮೂಲಕ, ಎಂದರೆ ಒಟ್ಟು ಹದಿಮೂರು ನೋಟುಗಳ ಮೂಲಕ ನೀಡಿದರೆ, ವಿದೇಶಿಯನು ಅಶುಭ, ಬೇಡ ಎನ್ನುವುದಿಲ್ಲ; ಅಂತೆಯೇ ಭಾರತೀಯನೂ ಏಳು ಅಥವಾ ಒಂಬತ್ತು ನೋಟುಗಳ ಮೂಲಕ ಬಂದ ಹಣ ಅಶುಭ ಎನ್ನುವುದಿಲ್ಲ.

ನಂಬಿಕೆಗಳು ಸಹ ಮನಸ್ಥಿತಿ, ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗುತ್ತವೆ ಎಂದು ಇದರಿಂದ ಸಾಬೀತಾಗುತ್ತದೆ. ಸ್ವಸ್ಥ ಜೀವನ ನಡೆಸುವ ವ್ಯಕ್ತಿ ಯಾವುದೇ ಸಂಖ್ಯೆಗೆ ಹೆದರುವ ಅಗತ್ಯವಿಲ್ಲ. ಅಸ್ವಸ್ಥ ಮನಕ್ಕೆ? ಅವರಿಗೆ ಅವರ ಮನಸ್ಸೇ ಅಶುಭ ಎನ್ನುವುದೊಂದೇ ಸತ್ಯಸ್ಯ ಸತ್ಯ.

■ ವೈ–ಚಾರಿ